ಸಂಯುಕ್ತ ಕರ್ನಾಟಕ

Wednesday, April 7th, 2010

# ವಿ.ವಿ.ಗಳಲ್ಲಿ ವಿದೇಶಾಂಗ ವ್ಯವಹಾರಗಳ ಅಧ್ಯಯನ

## ಮಂಗಳೂರು ವಿಶ್ವವಿದ್ಯಾಲಯ ಘಟಿಕೋತ್ಸವ

**ಮಂಗಳೂರು, ಏ.6:** ವಿದೇಶಾಂಗ ವ್ಯವಹಾರಗಳಲ್ಲಿ ವಿದ್ಯಾರ್ಥಿಗಳು ಪರಿಣತಿ ಹೊಂದಲು ವಿವಿ ಹಾಗೂ ಪದವಿ ಶಿಕ್ಷಣ ಸಂಸ್ಥೆಗಳಲ್ಲಿ ಅಂತಾರಾಷ್ಟ್ರೀಯ ವ್ಯವಹಾರಗಳ ಕುರಿತ ಅಧ್ಯಯನಕ್ಕೆ ಸುಧಾರಣೆ ತರುವ ಅವಶ್ಯಕತೆ ಇದೆ ಎಂದು ಎಂದು ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ಡಾ. ಶಶಿ ತರೂರ್ ಹೇಳಿದ್ದಾರೆ.

ಮಂಗಳವಾರ ಅವರು ಮಂಗಳೂರು ವಿಶ್ವವಿದ್ಯಾನಿಲಯದ 28ನೆ ಘಟಿಕೋತ್ಸವ ಭಾಷಣ ಮಾಡಿದರು.

ಸುಧಾರಣೆ ತರದಿದ್ದಲ್ಲಿ ಯುವ ಭಾರತೀಯರು ವಿದೇಶಿ ಭಾಷೆ, ವ್ಯವಹಾರಗಳಲ್ಲಿ ತೊಡಗಿಸಿಕೊಳ್ಳಲು ಕಷ್ಟಸಾಧ್ಯ. ಇಂದಿನ ಶಿಕ್ಷಣ ಸಂಸ್ಥೆಗಳು ಪರಿಣತ ಶಿಕ್ಷಕರ ಕೊರತೆ, ಕಳಪೆ ಮೂಲಭೂತ ಸೌಕರ್ಯ, ಅಪ್ರಸ್ತುತ ಪಠ್ಯಕ್ರಮ, ಅತ್ಯಲ್ಪ ಸಂಶೋಧನಾ ಅವಕಾಶಗಳಂತಹ ಸಮಸ್ಯೆಗಳನ್ನು ಎದುರಿಸುತ್ತಿದೆ. ಇದ-ರಿಂದ ವಿದ್ಯಾರ್ಥಿಗಳು ಅಂತಾರಾಷ್ಟ್ರೀಯ ಮಟ್ಟಗಳಲ್ಲಿ ವ್ಯವಹರಿಸುವುದನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಈ ಬಗ್ಗೆ ಉನ್ನತ ಶಿಕ್ಷಣ ಸಂಸ್ಥೆಗಳು ಗಮನಹರಿಸಬೇಕೆಂದು ಅವರು ಕಿವಿಮಾತು ಹೇಳಿದರು.

ಇಂದಿಗೂ ಅರ್ಧಕ್ಕೂ ಹೆಚ್ಚಿನ ಶೈಕ್ಷಣಿಕ ವಿಭಾಗಗಳಲ್ಲಿ ಇಂಟರ್‌ನೆಟ್, ಆನ್‌ಲೈನ್‌ಗಳ ವ್ಯವಸ್ಥೆಯಿದೆ. ಉತ್ತಮ ಪುಸ್ತಕ, ನಿಯತಕಾಲಿಕಗಳ, ವಿದೇಶಿ ಪ್ರವಾಸಗಳ ಅವಕಾಶಗಳಿಗೆ ಕೊರತೆಯಿದೆ ಎಂದ ಅವರು, ಕೆಲವು ಕ್ಷೇತ್ರಗಳಲ್ಲಿ ಪರಿಣತಿಯನ್ನು ಅಭಿವೃದ್ಧಿ ಪಡಿಸುವುದು ಅಗತ್ಯವಿದೆ ಎಂದರು.

ಅಂತಾರಾಷ್ಟ್ರೀಯ ಸಂಬಂಧಗಳಿಗೆ ಸಂಬಂಧಿಸಿದಂತೆ ಬದಲಾವಣೆಯ ಚಿಂತನೆಯಾಗಬೇಕಾಗಿದೆಯಾದರೂ ಇದನ್ನು ಸಾಧಿಸುವಲ್ಲಿ ವಿದ್ಯಾರ್ಥಿಗಳು ಭವಿಷ್ಯದ ನಾಯಕರಾಗಬೇಕೆಂದರು. ಶಿಕ್ಷಣ ನೀತಿಗಳಲ್ಲಿ ಬದಲಾವಣೆ ತರುವಲ್ಲಿ ಎಂಇಎ ಭಾರತದೊಂದಿಗೆ ಸಹಭಾಗಿತ್ವ ವಹಿಸಲು ಉತ್ಸುಕವಾಗಿದೆ ಎಂದರು.




ಘಟಿಕೋತ್ಸವ ಭಾಷಣ ಮಾಡುತ್ತಿರುವ ಡಾ. ಶಶಿ ತರೂರ್

ಸ್ವಾವಲಂಬಿ ಬದುಕು ದೇಶದ ಆರ್ಥಿಕತೆಯಲ್ಲಿ ಗುರುತರ ಬದಲಾವಣೆಯನ್ನು ಕಾಣಲು ಸಾಧ್ಯ ಎಂದರು. ಅಧ್ಯಕ್ಷತೆ ವಹಿಸಿದ್ದ ಗವರ್ನರ್ ಹಂಸರಾಜ್ ಭಾರದ್ವಾಜ್ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಏಳು ಮಂದಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಿ ಗೌರವಿಸಿದರು. ಅಣು ವಿಜ್ಞಾನಿ ಕೊಲ್ಕೊತ್ತದ ಡಾ. ರಾಕೇಶ್ ಭಂಡಾರಿ, ಶಿಕ್ಷಣತಜ್ಞ, ಕ್ರೀಡೆ, ಸಂಸ್ಕೃತಿಯ ಪ್ರವರ್ತಕ ಡಾ. ಎಂ. ಮೋಹನ ಆಳ್ವ, ಸಾಮಾಜಿಕ ಸೇವೆಗಾಗಿ ಬೆಂಗಳೂರಿನ ಎ.ಎಸ್. ವಿಷ್ಣು ಭಾರತ್ (ಚಾರ್ಟೆಡ್ ಅಕೌಂಟೆಂಟ್), ಆಸ್ಕರ್ ಫೆರ್ನಾಂಡಿಸ್ (ರಾಜಕೀಯ), ಬೆಂಗಳೂರಿನ ಮಧುರಾ ಎಂ. ಛತ್ರಪತಿ (ಸ್ವಯಂಸೇವಾ ಸಂಸ್ಥೆ), ಕಲಾಸೇವೆಗಾಗಿ ಕೋಳ್ಯೂರು ರಾಮಚಂದ್ರ ರಾವ್ (ಯಕ್ಷಗಾನ), ಶಿಕ್ಷಣ ತಜ್ಞ, ಸಾಮಾಜಿಕ ಕಾರ್ಯಕರ್ತ ಆರ್. ಚೆನ್‌ರಾಜ್ ಜೈನ್ ಗೌರವಕ್ಕೆ ಪಾತ್ರರಾಗಿದ್ದಾರೆ.